ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ, ದಿನಾಂಕ ೩೦ನೇ ಮಾರ್ಚಿ ೧೯೯೦, ಚೈತ್ರ ೯, ೧೯೧೨ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು.]

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು.—ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ವಿ.ಬಿ. ಸೂಲಿಯವರು ೨೯ನೇ ಮಾರ್ಚ್ ೯೦ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.

ಶ್ರೀಯುತರು ೫ನೇ ವಿಧಾನ ಸಭೆಯ ಸದಸ್ಯರಾಗಿದ್ದುದಲ್ಲದೆ, ಹುಕ್ಕೇರಿಯ ಕುಡಿಯುವ ನೀರಿನ ಸಮಿತಿಯ ಅಧ್ಯಕ್ಷರು ಹಾಗೂ ಟೌನ್ ಪಂಚಾಯತ್ ಸಮಿತಿಯ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿದ್ದಾರೆ.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು, ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರೆಲ್ಲರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಿದರು).

ದಿವಂಗತರ ಕುಟುಂಬ ವರ್ಗದವರಿಗೆ ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಕಳುಹಿಸಿ ಕೊಡಲಾಗುವುದು.

ಪ್ರಶ್ನೋತ್ತರಗಳು

ಅಧ್ಯಕ್ಷರು.—ಸಮಾಜ ಕಲ್ಯಾಣ ಮಂತ್ರಿಗಳಾದ ಮಾನ್ಯ ಶಿವಣ್ಣನವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ೫೫ನೇ ರಾಷ್ಟ್ರೀಯ ಕಾರ್ಯಕ್ರಮದಲ್ಲಿ ಭಾಗವಹಿಸಲು ದೆಹಲಿಗೆ ತೆರಳ ಬೇಕಾಗಿರುವುದರಿಂದ ಈ ಸದನಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ ಎಂಬುದನ್ನು ಈಗಾಗಲೇ ನನ್ನ ಗಮನಕ್ಕೆ ತಂದಿದ್ದಾರೆ. ದಿನಾಂಕ. ೩೦-೩-೯೦ರಂದು ಹೆಚ್ಚು ಪ್ರಶ್ನೆಗಳು ಇರುವುದರಿಂದ ನಾನು ಅವುಗಳಿಗೆ ಉತ್ತರಿಸಲು ಶಕ್ಯವಾಗದ ಕಾರಣ ಮುಂದಿನವಾರದ ಯಾವುದಾದರೂ ದಿವಸದಲ್ಲಿ ಆ ಪ್ರಶ್ನೆಗಳಿಗೆ ಉತ್ತರಿಸಲು ಸಿದ್ಧನಿದ್ದೇನೆ ನನ್ನ ಗೈರು ಹಾಜರಿಗೆ ಸಭೆ ಅನುಮತಿಸಬೇಕೆಂದು ಕೋರುತ್ತೇನೆ ಎಂದು ಹೇಳಿ ನನಗೆ ಪತ್ರ ಬರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇದು ಸಂಪ್ರದಾಯ ಅಲ್ಲ. ಇಲ್ಲಿ ನಮ್ಮ ಪ್ರಶ್ನೆಗಳು ಬರುವುದೇ ನಮ್ಮ ದುರ್ದೈವ. ಅಂಥಾದ್ದರಲ್ಲಿ ಪ್ರಶ್ನೆಗಳು ಇಲ್ಲಿ ಬಂದಿರುವಾಗ ಮಾನ್ಯ ಮಂತ್ರಿಗಳು ದೆಹಲಿಗೆ ಇಲ್ಲವೇ ಮತ್ತೊಂದು ಕಡೆ ಹೋಗುವಂತಹ ನೀತಿ ಸರಿಯಲ್ಲ. ಇಲ್ಲಿನ ಸಭೆಯನ್ನು ಮುಗಿಸಿಕೊಂಡು ಅವರು ಹೋಗಬೇಕೇ ವಿನಃ ಈ ಸಭೆ ನಡೆಯುವಾಗ ಅವರು ಹೋಗಬಾದು, ಅವರು ಇಲ್ಲಿ ಇರಬೇಕು ತಾವು ಈ ಬಗ್ಗೆ ಅವರಿಗೆ ಒಂದು ಎಚ್ಚರಿಕೆಯನ್ನು ನೀಡಬೇಕಾಗುತ್ತದೆ. ಈಗಾಗಲೇ ಯಾರ ಪ್ರಶ್ನೆಗೆ ಯಾರೋ ಉತ್ತರವನ್ನು ಕೊಡುತ್ತಿದ್ದಾರೆ. ಇದು ನಿಲ್ಲಬೇಕು.